# ಗಡಿಗೆ -40 ಡಿಗ್ರಿ ಚಳೀಲೂ ಯುದ್ಧ ಮಾಡುವ ಟ್ಯಾಂಕ್!

## ಚೀನಾಕ್ಕೆ ಸಡ್ಡು ಹೊಡೆಯಲು ಲಡಾಖ್ ಗಡಿಯಲ್ಲಿ ಶಸ್ತ್ರಾಸ್ತ್ರ ಜಮೆ
## 14500 ಅಡಿ ಎತ್ತರ ಪ್ರದೇಶಕ್ಕೆ ಟಿ 90, ಟಿ 72 ಟ್ಯಾಂಕ್ ರವಾನೆ
## ಫೈರ್ ಆ್ಯಂಡ್ ಫ್ಯೂರಿ ಹೆಸರಿನ ತುಕಡಿ ಗಡಿಯಲ್ಲಿ ಯುದ್ಧಕ್ಕೆ ಸಜ್ಜು



**ನವದೆಹಲಿ:** ಕಳೆದ 5 ತಿಂಗಳನಿಂದ ಲಡಾಖ್ ಗಡಿಯಲ್ಲಿ ನಿರಂತರ ತಂಟೆ ಮಾಡುತ್ತಿರುವ ಚೀನಾ ಈ ಸಂಘರ್ಷವನ್ನು ಮುಂದಿನ ಚಳಿಗಾಲಕ್ಕೂ ವಿಸ್ತರಿಸುವ ಸುಳಿವು ನೀಡಿರುವ ಹಿನ್ನೆಲೆಯಲ್ಲಿ, ಭಾರತೀಯ ಸೇನೆ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಂಡಿದೆ. ಪೂರ್ವ ಲಡಾಖ್‌ನಲ್ಲಿ ಅಕ್ಟೋಬರ್‌ನಿಂದ ಜನವರಿ ತಿಂಗಳವರೆಗೆ ತಾಪಮಾನ ಮೈನಸ್ 5ರಿಂದ ಮೈನಸ್ 25 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪಲಿದ್ದು, ಆ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಟಿ 90, ಟಿ 72 ಯುದ್ಧ ಟ್ಯಾಂಕ್ ಮತ್ತು ವಾಹನಗಳನ್ನು ವ್ಯೂಹಾತ್ಮಕ ಸ್ಥಳಗಳಿಗೆ ನಿಯೋಜಿಸುವ ಮೂಲಕ ಚೀನಾಕ್ಕೆ ತಿರುಗೇಟು ನೀಡಿದೆ. ಇವು ಮೈನಸ್ 40 ಡಿ. ಸೆ.ನಲ್ಲೂ ಯಾವುದೇ ತೊಂದರೆ ಇಲ್ಲದೆ ಕಾರ್ಯನಿರ್ವಹಿಸುವ ಕ್ಷಮತೆ ಹೊಂದಿವೆ. ಪೂರ್ವ ಲಡಾಖ್‌ನಲ್ಲಿ ವಿಶ್ವದ ಅತ್ಯಾಧುನಿಕ ಯುದ್ಧ ಟ್ಯಾಂಕ್‌ಗಳು ನಿಯೋಜನೆಗೊಂಡಿರುವ ವಿಡಿಯೋಗಳನ್ನು ಸ್ವತಃ ಭಾರತೀಯ ಸೇನೆಯೇ ಬಿಡುಗಡೆ ಮಾಡಿದೆ.

ಸಮುದ್ರ ಮಟ್ಟದಿಂದ 14500 ಅಡಿ ಮೇಲಿರುವ ಚುಮರ್ ಹಾಗೂ ಡೆಮ್ ಚೋಕ್ ಪ್ರದೇಶದಲ್ಲಿ ಟಿ-90 ಮತ್ತು ರಷ್ಯಾ ನಿರ್ಮಿತ ಬಿಎಂಪಿ ಯುದ್ಧ ಟ್ಯಾಂಕ್‌ಗಳ ಸಾಲುಸಾಲನ್ನೇ ಭಾರತೀಯ ಸೇನೆ ನಿಯೋಜಿಸಿದೆ. ಇದು ಬಹುಶಃ ಜಗತ್ತಿನಲ್ಲೇ ಇಷ್ಟು ಎತ್ತರದ ಪ್ರದೇಶದಲ್ಲಿ ಯುದ್ಧ ಟ್ಯಾಂಕ್‌ಗಳನ್ನು ನಿಯೋಜಿಸಿದ ಮೊದಲ ಘಟನೆಯಾಗಿದೆ ಎಂದು ಹೇಳಲಾಗಿದೆ.

- ಭಾರತೀಯ ಸೇನೆಯಿಂದಲೇ ಟ್ಯಾಂಕ್ ವೀಡಿಯೋ ಬಿಡುಗಡೆ
- ಇಷ್ಟು ಎತ್ತರದಲ್ಲಿ ಯುದ್ಧ ಟ್ಯಾಂಕ್ ಜಗತ್ತಿನಲ್ಲೇ ಮೊದಲು!
- ಚಳಿ, ಬೆಟ್ಟಗುಡ್ಡ ಪ್ರದೇಶದಲ್ಲೂ ಕಾರ್ಯನಿರ್ವಹಿಸುವ ಸಾಮರ್ಥ್ಯ ಇದಕ್ಕೆ

ಅತ್ಯಂತ ತೀಕ್ಷ್ಣ ವಾತಾವರಣದಲ್ಲಿ ಕಾರ್ಯನಿರ್ವಹಿಸುವ ಯುದ್ಧ ಟ್ಯಾಂಕ್‌ಗಳ ಜೊತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ, ಇಂಧನ, ಆಹಾರ, ಟೆಂಟರ್, ಸಂಪರ್ಕ ಸಾಧನಗಳು, ಹೀಟರ್ ಮತ್ತು ಚಳಿಗಾಲದಲ್ಲಿ ಅತ್ಯಗತ್ಯವಾದ ಬಹುತೇಕ ಎಲ್ಲಾ ಸಾಮಗ್ರಿಗಳನ್ನು ಭಾರತೀಯ ಸೇನೆ ಈಗಾಗಲೇ ಆಯಕಟ್ಟಿನ ಸ್ಥಳಗಳಿಗೆ ರವಾನಿಸಿದೆ. ಇದಕ್ಕಾಗಿ ಹೆಲಿಕಾಪ್ಟರ್, ಸಿ- 130 ಜೆ ಸೂಪರ್ ಹರ್ಕ್ಯುಲಸ್, ಸಿ-17 ಗ್ಲೋಬಲ್ ಮಾಸ್ಟರ್ ಸರಕು ವಿಮಾನ ಸೇರಿದಂತೆ ವಾಯುಪಡೆಯ ಎಲ್ಲಾ ಸರಕು ಸಾಗಣೆ ವಿಮಾನಗಳನ್ನು ಬಳಸಿಕೊಳ್ಳಲಾಗಿದೆ. ►7

Principal Team Partner